ಜೊಲ್ಲೆ ಗ್ರೂಪ್
ವಾರ್ತಾ ಪತ್ರ
(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)
ಜೂನ 2023–ಸಂಪುಟ–7 ಸಂಚಿಕೆ–07

# ದರ್ಪಣ

## ವಿಜಯೋತ್ಸವ



ವಿಧಾನಸಭಾ ಚುನಾವಣೆಯಲ್ಲಿ ಸತತ ಮೂರನೇ ಬಾರಿಗೆ ನಿಪ್ಪಾಣಿ ಮತಕ್ಷೇತ್ರದಿಂದ ಗೆಲುವು ಸಾಧಿಸಿದ ಸಲುವಾಗಿ ನಗರದಲ್ಲಿ ನಡೆದ ವಿಜಯೋತ್ಸವದಲ್ಲಿ ಭಾಗವಹಿಸಿ ದೃಶ್ಯ.

### ಸತತ ಮೂರನೇ ಬಾರಿಗೆ ಜಯಗಳಿಸಿ ಶಾಸಕರಾಗಿ "ಹ್ಯಾಟ್ರಿಕ ಸಾಧನೆ" ಮಾಡಿರುವ

## ಸೌ. ಶಶಿಕಲಾ ಜೊಲ್ಲೆ ಯವರಿಗೆ ಅಭಿನಂದನೆಗಳು!

ಸಮಾಜದ ಸರ್ವಾಂಗೀನ ಬೆಳವಣಿಗೆಗಾಗಿ ನಿರಂತರ ಪ್ರಯತ್ನಿಸುತ್ತ ಸಾಮಾಜಿಕ, ಶೈಕ್ಷಣಿಕ, ಸಹಕಾರ, ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಉತ್ತಮ ಸಾಧನೆಗಳನ್ನು ಮಾಡಿ ಮಹಿಳಾ ಸಬಲೀಕರಣದ ಧೋರಣೆಗಳನ್ನು ಮತ್ತು ಯೋಜನೆಗಳನ್ನು ಅನುಷ್ಠಾನಗೊಳಿಸಿ ಯಶಸ್ವಿಯ ಪಥದಲ್ಲಿ ಸಾಗುತ್ತಿರುವ ಸೌ. ಶಶಿಕಲಾ ಜೊಲ್ಲೆ ಯವರು ಸಮಾಜಕ್ಕೆ ಮಾದರಿಯ ವಕ್ತಿಯಾಗಿ ಮಹಿಳೆಯರಿಗೆ, ರೈತರಿಗೆ, ದೀನದಲಿತರಿಗೆ, ಬಡವರಿಗೆ ಮತ್ತು ಯುವಕ–ಯುವತಿಯರಿಗೆ ಸ್ಪೂರ್ಥಿಯಾಗಿದ್ದಾರೆ.

ಬೆಳಗಾವಿ ಜಿಲ್ಲೆಯ ಗಡಿಭಾಗವಾದ ನಿಪ್ಪಾಣಿ ವಿಧಾನಸಭಾ ಕ್ಷೇತ್ರದ ಸರ್ವತೋಮುಖ ಪ್ರಗತಿ ಗೈದು ಜನರ ಶ್ರೇಯೋಭಿವೃದ್ಧಿಗಾಗಿ ನಿರಂತರ ಶ್ರಮಿಸುತ್ತಾ ಎಲ್ಲವರ್ಗಗಳ ಸಮಾನ ಪ್ರಗತಿಗೆ ಕಾರ್ಯಯೋಜನೆಗಳನ್ನು ರೂಪಿಸಿ ಸರ್ವರಿಗೂ ಸಮಾನ ಅವಕಾಶಗಳನ್ನು ನೀಡಿ ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ದೃವತಾರೆಯಾಗಿದ್ದಾರೆ. ಕ್ರಿಯಾಶಿಲ ವ್ಯಕ್ತಿತ್ವ ಸದಾ ನಗುಮುಖದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆಯವರು ಸತತ ಮೂರನೇ ಬಾರಿಗೆ ಆಯ್ಕೆಯಾಗಿ ಹ್ಯಾಟ್ರಿಕ್ ಸಾಧನೆಮಾಡಿರುವ ಇವರಿಗೆ ನಮ್ಮೆಲ್ಲರ ಕೋಟಿ–ಕೋಟಿ ಅಭಿನಂದನೆಗಳು !

ದನಿವರಿಯದ ಜನಸೇವಕರಾಗಿ ಅತಿ ಉತ್ಸಾಹದಿಂದ ಯಾವುದೇ ಸಂದರ್ಭದಲ್ಲೂ "ಜನಸೇವೆಯೇ ಜನಾರ್ಧನ ಸೇವೆ" ಎಂದು ಹಗಲಿರುಳು ಜನಸೇವೆಯಲ್ಲಿಯೇ ತಮ್ಮನ್ನು ತಾವು ತೊಡಗಿಸಿಕೊಂಡು ಪ್ರವಾಹ ಪರಿಸ್ಥಿತಿ, ಕೋವಿಡ್–19 ಮತ್ತು ಇತರೇ ಸಂಕಷ್ಟಗಳಲ್ಲಿ ಸಮಭಾಗಿಯಾಗಿ ಜನರ ಕಷ್ಟ ಸುಖಗಳಿಗೆ ಪ್ರತಿ ಸ್ಪಂದಿಸಿ ಜನರಲ್ಲಿ ಆತ್ಮಸ್ಥೈರ್ಯ ಮತ್ತು ಆತ್ಮವಿಶ್ವಾಸ ಹೆಚ್ಚುಮಾಡಿ ಅವರಲ್ಲಿ ಜೀವಚೈತನ್ಯ ತುಂಬಿ ಹೊಸಬದುಕನ್ನು ಕಟ್ಟಿಕೊಳ್ಳಲು ಸಹಾಯ, ಸಹಕಾರ, ನೆರವು ನೀಡಿರುವುದನ್ನು ಜನರು ಇಂದಿಗೂ ಸ್ಮರಿಸುತ್ತಾರೆ.

ಇವರ ಯಶಸ್ಸಿನ ಹಿಂದೆ ಇವರ ಪತಿದೇವರಾದ ಸಹಕಾರ ವಹರ್ಷಿ, ಹಾಗೂ ಜನಪ್ರಿಯ ಸಂಸದರಾದ ಶ್ರೀ. ಅಣ್ಣಾಸಾಹೇಬ ಜೊಲ್ಲೆ ಯವರ ತ್ಯಾಗ ಸಹಕಾರ, ಪರಿಶ್ರಮ, ಪ್ರೋತ್ಸಾಹ ಅಪಾರವಾದ ಪ್ರೀತಿಯ ಪಾತ್ರ ತುಂಬಾ ಇದೆ.

ರಾಜ್ಯದ ಗಡಿ ಭಾಗವಾದ ನಿಪ್ಪಾಣಿ ವಿಧಾನಸಭಾ ಕ್ಷೇತ್ರವು ಇಂದು ಅನೇಕ ರೀತಿಯಿಂದ ಅಬಿವೃದ್ಧಿಯನ್ನು ಸಾಧಿಸಿದೆ ಹಾಗೂ ಕ್ಷೇತ್ರವು ಹೊಸದಿಕ್ಕಿನತ್ತ ಸಾಗುತ್ತಿರುವುದು ಮತ್ತು ಹೊಸರೂಪ ಪಡೆಯುತ್ತಿರುವುದಕ್ಕೆ ಸೌ. ಶಶಿಕಲಾ ಜೊಲ್ಲೆ ಯವರ ಪ್ರಾಮಾಣಿಕ ಪ್ರಯತ್ನವೇ ಕಾರಣವಾಗಿದೆ.

"ಒಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬ ಯಶಸ್ವಿ ಮಹಿಳೆ ಇರುತ್ತಳೆ" ಎನ್ನುವುದು ನಾನ್ನುಡಿಯಾಗಿದೆ. ಆದರೆ ಜೊಲ್ಲೆ ಕುಟುಂಬದಲ್ಲಿ "ಯಶಸ್ವಿ ಮಹಿಳೆಯ ಹಿಂದೆ ಒಬ್ಬ ಯಶಸ್ವಿ ಪುರುಷ ಇದ್ದಾರೆ" ಎಂಬುವುದಕ್ಕೆ ಸಂಸದರಾದ ಶ್ರೀ. ಅಣ್ಣಾಸಾಹೇಬ ಜೊಲ್ಲೆಯವರೇ ಸತ್ಯ ನಿದರ್ಶನ ವಾಗಿದ್ದಾರೆ. ನಿಪ್ಪಾಣಿ ಕ್ಷೇತ್ರದ ಸಂಪೂರ್ಣ ಅಭಿವೃದ್ಧಿಗಾಗಿ ಜೊಲ್ಲೆ ಮನೆತನವು ಸಾಕಷ್ಟು ಸಹಕಾರ ನೀಡುತ್ತ ಬಂದಿರುವುದಕ್ಕೆ ಇವರ ಪಾರದರ್ಶಕ ಸೇವೆ, ನಿಸ್ವಾರ್ಥ ಸೇವೆ ಮತ್ತು ಜನಪರ ಕಾಳಜಿಗಳೆ ಕಾರಣವಾಗಿವೆ.

ಸಮಯ ಪ್ರಜ್ಞೆ ಮತ್ತು ಮಾಡುವ ಕಾರ್ಯದಲ್ಲಿ ನಿಷ್ಠೆ, ಶ್ರದ್ಧೆ, ಸಕಾರತ್ಮಕ ಚಿಂತನೆಗಳು ಹಾಗೂ ನಂಬಿಕೆ–ವಿಶ್ವಾಸ ಇವೆಲ್ಲವೂ ಒಬ್ಬ ವ್ಯಕ್ತಿಯ ಯಶಸ್ಸಿಗೆ ಆದಾರ ಸ್ಥಂಬಗಳಾಗಿವೆ ಎಂಬುವುದನ್ನು ಅರಿತ ಇವರು ನಿರಂತರ ಈ ಎಲ್ಲ ಮೌಲ್ಯಗಳನ್ನು ತಮ್ಮ ಬದುಕಿನಲ್ಲಿ ಹಾಸುಹೊಕ್ಕಾಗಿಸಿಕೊಂಡು ಸಮಾಜಕ್ಕೆ ಆದರ್ಶಪ್ರಾಯವಾಗಿದ್ದಾರೆ. ಯಾವುದೇ ತಾರತಮ್ಯವಿಲ್ಲದೆ ಅಸಹಾಯಕರು, ದುರ್ಬಲರು ಮತ್ತು ಮಹಿಳೆಯರ ಸ್ಥಿತಿಗತಿಗಳನ್ನು ಸುಧಾರಿಸುವಲ್ಲಿ ಮಹಿಳೆಯರ ಸ್ಥಾನಮಾನಗಳಲ್ಲಿ ಬದಲಾವಣೆಗಳನ್ನು ತರುವಲ್ಲಿ ಶ್ರೀ. ಅಣ್ಣಾಸಾಹೇಬ ಜೊಲ್ಲೆ ಹಾಗೂ ಸೌ. ಶಶಿಕಲಾ ಜೊಲ್ಲೆ, ಶ್ರೀ. ಜ್ಯೋತಿಪ್ರಸಾದ ಜೊಲ್ಲೆ, ಶ್ರೀ. ಬಸವಪ್ರಸಾದ ಜೊಲ್ಲೆ ಯವರ ಪಾತ್ರ ಅತ್ಯಂತ ಮಹತ್ವಪೂರ್ಣವಾಗಿದೆ.

ಸತತ ಮೂರನೇ ಬಾರಿಗೆ ಜನಪ್ರಿಯ ಶಾಸಕಿಯಾಗಿ ಬಹುಮತ ಗಳಿಂದ ವಿಧಾನಸಭಾ ಚುನಾವಣೆಯಲ್ಲಿ ಜಯಗಳಿಸಿ "ಹ್ಯಾಟ್ರಿಕ ಸಾಧನೆ" ಮಾಡಿರುವ ಸೌ. ಶಶಿಕಲಾ ಜೊಲ್ಲೆ ಯವರಿಗೆ ಜೊಲ್ಲೆ ಗ್ರೂಪ್‌ನ ಎಲ್ಲ ಸಿಬ್ಬಂದಿ ವರ್ಗದವರ ಕೋಟಿ–ಕೋಟಿ ಅಭಿನಂದನೆಗಳು!!

ಪ್ರೊ. ಬಾಬಾಸಾಹೇಬ ಆರ್. ಕಾಮನಗೋಳ
ಸಹ ಪ್ರಾಧ್ಯಾಪಕರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಇಡಿ.)
ಶಿಕ್ಷಣ ಮಹಾವಿದ್ಯಾಲಯ, ನಣದಿ

## ಶ್ರೀ ಬೀರೇಶ್ವರ ಕೋ–ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ–ಸ್ಟೇಟ)

ಕ್ರಿಯಾತ್ಮಕ ಹಾಗೂ ಪ್ರಗತಿಶೀಲ ಅರ್ಥವ್ಯವಸ್ಥೆ



# ಅಂತಾರಾಷ್ಟ್ರೀಯ ದಾದಿಯರ (Nurses) ದಿನ

ಅಂತರರಾಷ್ಟ್ರೀಯ ದಾದಿಯರ ದಿನವು ಪ್ರಪಂಚದಾದ್ಯಂತದ ದಾದಿಯರ ಅಮೂಲ್ಯ ಕೊಡುಗೆಗಳನ್ನು ಗೌರವಿಸುವ ಮತ್ತು ಗುರುತಿಸುವ ಪ್ರಮುಖ ದಿನವಾಗಿದೆ. ವೈದ್ಯಕೀಯ ಕ್ಷೇತ್ರದಲ್ಲಿ ದಾದಿಯರು ಪ್ರಮುಖ ಪಾತ್ರ ವಹಿಸುತ್ತಾರೆ ಮತ್ತು ರೋಗಿಗಳ ಯೋಗಕ್ಷೇಮ, ಸುರಕ್ಷತೆ ಮತ್ತು ಚೇತರಿಕೆಗೆ ಜವಾಬ್ದಾರರಾಗಿರುತ್ತಾರೆ.

ಪ್ರಪಂಚದಾದ್ಯಂತ ಮೇ 12ರಂದು ಅಂತರಾಷ್ಟ್ರೀಯ ದಾದಿಯರ ದಿನ (International Nurses Day)ವನ್ನಾಗಿ ಆಚರಿಸಲಾಗುತ್ತದೆ. ಫ್ಲಾರೆನ್ಸ್ ನೈಟಿಂಗೇಲ್ ಅವರ ಜನ್ಮದಿನದ ಗೌರವಾರ್ಥವಾಗಿ ವಿಶ್ವದಾದ್ಯಂತ ಅಂತರರಾಷ್ಟ್ರೀಯ ದಾದಿಯರ ದಿನವನ್ನು ಆಚರಿಸಲಾಗುತ್ತದೆ. ಇಂಟರ್ನ್ಯಾಷನಲ್ ಕೌನ್ಸಿಲ್ ಆಫ್ ನರ್ಸ್ (ICN) ಈ ಮಹತ್ವದ ದಿನವನ್ನು ವಿಶ್ವದಾದ್ಯಂತ ಆಚರಿಸಲು ಕರೆನೀಡಿತು. ಆದ್ದರಿಂದ ಪ್ರತಿವರ್ಷ ದಾದಿಯರ ಕೊಡುಗೆಯನ್ನು ವಿವರಿಸುವ ಜಾಗತಿಕ ಅಭಿಯಾನ ದಿನವನ್ನು ಆಚರಿಸಲಾಗುತ್ತದೆ.

**ಅಂತರಾಷ್ಟ್ರೀಯ ದಾದಿಯರ ದಿನ 2023ರ ಧ್ಯೇಯ**

ಈ ವರ್ಷದ ಥೀಮ್, "ನಮ್ಮ ದಾದಿಯರು. ನಮ್ಮ ಭವಿಷ್ಯ", ಜಾಗತಿಕ ಆರೋಗ್ಯ ಸವಾಲುಗಳನ್ನು ಎದುರಿಸಲು ಮತ್ತು ವಿಶ್ವದಾದ್ಯಂತ ಆರೋಗ್ಯ ರಕ್ಷಣೆಯನ್ನು ಹೆಚ್ಚಿಸಲು ಭವಿಷ್ಯದಲ್ಲಿ ಶುಶ್ರೂಷೆಗಾಗಿ ದಾದಿಯರ ಕೊಡುಗೆಯನ್ನು ವಿವರಿಸುವ ಜಾಗತಿಕ ಅಭಿಯಾನವಾಗಿದೆ.

**ಅಂತರಾಷ್ಟ್ರೀಯ ದಾದಿಯರ ದಿನದ ಮಹತ್ವ**

ಅಂತರರಾಷ್ಟ್ರೀಯ ದಾದಿಯರ ದಿನವು ಪ್ರಪಂಚದಾದ್ಯಂತದ ದಾದಿಯರ ಅಮೂಲ್ಯ ಕೊಡುಗೆಗಳನ್ನು ಗೌರವಿಸುವ ಮತ್ತು ಗುರುತಿಸುವ ಪ್ರಮುಖ ದಿನವಾಗಿದೆ. ವೈದ್ಯಕೀಯ ಕ್ಷೇತ್ರದಲ್ಲಿ ದಾದಿಯರು ಪ್ರಮುಖ ಪಾತ್ರ ವಹಿಸುತ್ತಾರೆ ಮತ್ತು ರೋಗಿಗಳ ಯೋಗಕ್ಷೇಮ, ಸುರಕ್ಷತೆ ಮತ್ತು ಚೇತರಿಕೆಗೆ ಜವಾಬ್ದಾರರಾಗಿರುತ್ತಾರೆ. ನರ್ಸ್‌ಗಳು ಎದುರಿಸುವ ಅನೇಕ ಸವಾಲುಗಳ ಹೊರತಾಗಿಯೂ, ಹೊಸ ಜೀವನವು ಜಗತ್ತನ್ನು ಪ್ರವೇಶಿಸಲು ಮತ್ತು ಅನಾರೋಗ್ಯ ಮತ್ತು ಗಾಯಗೊಂಡವರನ್ನು ನೋಡಿಕೊಳ್ಳಲು ಅವರು ದಣಿವರಿವಿಲ್ಲದೆ ಕೆಲಸ ಮಾಡುತ್ತಾರೆ.

ಚಿಕಿತ್ಸೆಗಳನ್ನು ನಿರ್ವಹಿಸುವುದು, ರೋಗಿಗಳನ್ನು ಮೇಲ್ವಿಚಾರಣೆ ಮಾಡುವುದು, ಜೂನಿಯರ್ ದಾದಿಯರಿಗೆ ಮಾರ್ಗದರ್ಶನ ನೀಡುವುದು ಮತ್ತು ವೈದ್ಯಕೀಯ ದಾಖಲೆಗಳನ್ನು ನಿರ್ವಹಿಸುವುದು ಸೇರಿದಂತೆ ದಾದಿಯರು ವೈವಿಧ್ಯಮಯ ಜವಾಬ್ದಾರಿಗಳನ್ನು ಹೊಂದಿದ್ದಾರೆ. ಅವರ ಕೆಲಸವು ರೋಗಿಗಳು ಅತ್ಯುತ್ತಮವಾದ ಆರೈಕೆ ಮತ್ತು ಬೆಂಬಲವನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಸಹಾಯ ಮಾಡುತ್ತದೆ ಮತ್ತು ಪ್ರಪಂಚದಾದ್ಯಂತ ಆರೋಗ್ಯ ಮತ್ತು ಯೋಗಕ್ಷೇಮವನ್ನು ಉತ್ತೇಜಿಸುವಲ್ಲಿ ಅವರು ನಿರ್ಣಾಯಕ ಪಾತ್ರವನ್ನು ವಹಿಸುತ್ತಾರೆ. ಹಾಗಾಗಿ ಅಂತರಾಷ್ಟ್ರೀಯ ದಾದಿಯರ ದಿನವನ್ನು ಆಚರಿಸುವುದು ಮತ್ತು ಎಲ್ಲೆಡೆ ದಾದಿಯರ ಸಮರ್ಪಣೆ ಮತ್ತು ಬದ್ಧತೆಗೆ ನಮ್ಮ ಮೆಚ್ಚುಗೆಯನ್ನು ತೋರಿಸುವುದು ಮುಖ್ಯವಾಗಿದೆ.

**ಅಂತರರಾಷ್ಟ್ರೀಯ ದಾದಿಯರ ದಿನದ ಇತಿಹಾಸ:**

1965 ರಲ್ಲಿ, ಇಂಟರ್ನ್ಯಾಷನಲ್ ಕೌನ್ಸಿಲ್ ಆಫ್ ನರ್ಸಸ್ ಮೇ 12 ಅನ್ನು ಪ್ರಮುಖ ದಿನಾಂಕವಾಗಿ ಆಚರಿಸಲು ಪ್ರಾರಂಭಿಸಿತು ಏಕೆಂದರೆ ಅದು ಆಧುನಿಕ ಶುಶ್ರೂಷೆಯ ಸಂಸ್ಥಾಪಕ ಫ್ಲಾರೆನ್ಸ್ ನೈಟಿಂಗೇಲ್ ಅವರ ಜನ್ಮದಿನವಾಗಿತ್ತು. ಅಂತಿಮವಾಗಿ, ಜನವರಿ 1974 ರಲ್ಲಿ, ದಿನವನ್ನು ಅಧಿಕೃತವಾಗಿ ಅಂತರರಾಷ್ಟ್ರೀಯ ದಾದಿಯರ ದಿನವೆಂದು ಗುರುತಿಸಲಾಯಿತು. ಅಂತರಾಷ್ಟ್ರೀಯ ದಾದಿಯರ ದಿನದ ಕಿಟ್ ಅನ್ನು ಪ್ರತಿ ವರ್ಷ ICN ಸಿದ್ಧಪಡಿಸುತ್ತದೆ ಮತ್ತು ವಿತರಿಸುತ್ತದೆ ಮತ್ತು ವಿಶ್ವದಾದ್ಯಂತ ದಾದಿಯರಿಗೆ ಶೈಕ್ಷಣಿಕ ಮತ್ತು ಸಾರ್ವಜನಿಕ ಮಾಹಿತಿ ಸಾಮಗ್ರಿಗಳನ್ನು ಒಳಗೊಂಡಿದೆ. ಪ್ರತಿ ವರ್ಷ, ಅಂತರಾಷ್ಟ್ರೀಯ ದಾದಿಯರ ದಿನವು ವಿಶಿಷ್ಟವಾದ ಧ್ಯೇಯದೊಂದಿಗೆ ಆಚರಿಸಲಾಗುತ್ತದೆ.

**ಯಾರೀಕೆ ಫ್ಲಾರೆನ್ಸ್ ನೈಟಿಂಗೇಲ್?**

1820ರ ಮೇ 12ರಂದು ಜನಿಸಿದ ಫ್ಲಾರೆನ್ಸ್ ನೈಟಿಂಗೇಲ್ ಇವರನ್ನು 'ಆಧುನಿಕ ನರ್ಸಿಂಗ್‌ನ ರೂವಾರಿ' ಎಂದು ಕರೆಯುತ್ತಾರೆ. ಮೂಲತಃ ಇಟಲಿ ದೇಶದಲ್ಲಿ ಜನಿಸಿ ಬಳಿಕ ಬ್ರಿಟಿಷ್ ದೇಶದ ಸಂಜಾತೆಯಾದ ಈಕೆ 13 ಆಗಸ್ಟ್ 1910ರಲ್ಲಿ ಇಹಲೋಕ ತ್ಯಜಿಸಿದರು. ಸುಮಾರು 90 ವರ್ಷಗಳ ಪರಿಪೂರ್ಣ ಬದುಕು ಸವೆಸಿದ ಈಕೆ ತನ್ನ ಜೀವನವನ್ನು ಮನುಕುಲದ ಸೇವೆಗೆ ಮುಡಿಪಾಗಿಟ್ಟಿದ್ದಳು. ಸಾಮಾಜಿಕ ಕಾರ್ಯಕರ್ತೆಯಾಗಿದ್ದ ಈಕೆ ವೃತ್ತಿಯಲ್ಲಿ ಅಂಕಿ ಅಂಶ ತಜ್ಞೆಯಾಗಿದ್ದಳು. ಆದರೆ ನೊಂದವರ ದೀನ ದಲಿತರ ಪಾಲಿಗೆ ಈಕೆ ಸಾಕ್ಷಾತ್ ದೇವತೆಯಾಗಿದ್ದಳು.

ಕ್ರಿಮಿನ್ ಯುದ್ಧದ ಸಮಯದಲ್ಲಿ ನುರಿತ ದಾದಿಯರ ತಂಡದ ನಾಯಕಿಯಾಗಿ ಈಕೆ, ಗಾಯಗೊಂಡ ಸೈನಿಕರ ಸೇವೆಯನ್ನು ಹಗಲು ರಾತ್ರಿ ಮಾಡಿ ಹಲವಾರು ಸೈನಿಕರು ಜೀವ ಉಳಿಸಿದ್ದಳು. ರಾತ್ರಿ ಹೊತ್ತು ಯುದ್ಧ ಭೂಮಿಯಲ್ಲಿ ಕತ್ತಲಿನ ನಡುವೆ ದೀಪವನ್ನು ಹಿಡಿದುಕೊಂಡು ನೊಂದ ಮತ್ತು ಗಾಯಗೊಂಡ ಸೈನಿಕರ ಸೇವೆ ಮಾಡಿ "ಲೇಡಿ ಆಫ್ ಲ್ಯಾಂಪ್" ಎಂಬ ಹೆಸರಿನಿಂದ ಪ್ರಖ್ಯಾತಿಗೊಂಡಿದ್ದರು.

ಈಕೆ ಮಾಡಿದ ನಿಸ್ವಾರ್ಥ ಸೇವೆಯಿಂದ ವಿಕ್ಟೋರಿಯಾ ಸಂಸ್ಕೃತಿಯಲ್ಲಿ ದಾದಿಗಳಿಗೆ ವಿಶೇಷವಾದ ಸ್ಥಾನಮಾನ ದೊರೆತು ಬಹಳಷ್ಟು ಸೇವಾ ಮನೋಭಾವದ ಜನರು ನರ್ಸಿಂಗ್ ಕಲಿಕೆಗೆ ಮುಂದಾಗಿದ್ದರು ಎಂಬುದು ಗಮನಾರ್ಹ ಅಂಶ ಮತ್ತು ವೈದ್ಯಕೀಯ ಜಗತ್ತಿನಲ್ಲಿ ದಾದಿಯರಿಗೆ ಅತಿ ವಿಶಿಷ್ಟವಾದ ಸ್ಥಾನಮಾನ ಮುಂದೆ ಸಿಗುವಲ್ಲಿ ಸಹಕಾರಿಯಾಯಿತು ಎಂದರೂ ತಪ್ಪಾಗಲಿಕ್ಕಿಲ್ಲ.

---

# ಹವ್ಯಾಸಗಳು ವೃತ್ತಿಯಾದಾಗ

ಹವ್ಯಾಸಗಳು ವ್ಯಕ್ತಿಗಳ ಜೀವನದ ಅವಿಭಾಜ್ಯ ಅಂಗ, ಹವ್ಯಾಸಗಳು ಜೀವನದ ದಿಕ್ಕುಗಳನ್ನು ಬದಲಿಸುತ್ತವೆ. ಕೆಲವರಿಗೆ ಉತ್ತಮ ಹವ್ಯಾಸಗಳಿದ್ದರೆ ಇನ್ನು ಕೇಲವರಿಗೆ ಕೆಟ್ಟ ಹವ್ಯಾಸಗಳಿರುತ್ತವೆ. ಹವ್ಯಾಸಗಳು ನಮಗರಿವಿಲ್ಲದೆಯೇ ನಮ್ಮಲ್ಲಿ ಹೂತು ಹೋಗಿರುತ್ತವೆ. ಹವ್ಯಾಸಗಳ ಆಚರಣೆ ಮಾಡುವುದು ಕಷ್ಟಕರವೇನಲ್ಲ. ಅವು ನಮ್ಮ ಇಷ್ಟದಂತೆ ದಿನನಿತ್ಯದ ಜೀವನದಲ್ಲಿ ಬೆರೆತು ಹೋಗಿರುತ್ತವೆ.

ವ್ಯಕ್ತಿಗಳು ಒಬ್ಬರಿಂದ ಒಬ್ಬರಿಗೆ ಭಿನ್ನರಾಗಿರುತ್ತಾರೆ. ಅವರ ಸಂಸ್ಕೃತಿ, ಮಾತು ನಡೆನುಡಿ ವಿಚಾರಧಾರೆಗಳು ಹೀಗೆ ಎಲ್ಲವೂ ವಿಭಿನ್ನ ಹೀಗಾಗಿ ಅವರಿಗೆ ಇಷ್ಟವಾದ ಒಲವಿರುವ ವಿಷಯಗಳಲ್ಲಿ ಅಥವಾ ಕೆಲಸಗಳಲ್ಲಿ ಆಸಕ್ತಿ ತೋರಿ ಅವುಗಳನ್ನೆ ಹವ್ಯಾಸಗಳನ್ನಾಗಿ ಮಾಡಿಕೊಳ್ಳುತ್ತಾರೆ. ಹೀಗೆ ಹವ್ಯಾಸಗಳನ್ನೇ ವೃತ್ತಿಯನ್ನಾಗಿ ಮಾಡಿಕೊಂಡ ಸಾವಿರಾರು ಜನ ಜೀವನದಲ್ಲಿ ಯಶಸ್ಸು ಕಂಡು ಇಡಿ ಜಗತ್ತಿಗೆ ದಾರಿದೀಪವಾದ ಉದಾಹರಣೆಗಳು ನಮ್ಮೆದುರಿಗಿವೆ. ಇಂದಿನ ಆಧುನಿಕ ಯುಗದಲ್ಲಿ ಎಲ್ಲರೂ ಸ್ಪರ್ಧೆಗೆ ಇಳಿದು ಬಿಟ್ಟಿದ್ದಾರೆ. ಆದರೆ ಸಂತೃಪ್ತ ಜೀವನ ನಡೆಸಲು ಬೇಕಾದ ಕನಿಷ್ಠ ಮಾನವೀಯ ಮೌಲ್ಯಗಳು ಸುಖ ಸಂತೋಷಗಳನ್ನು ಮರೆತು ಸ್ಪರ್ಧೆಗೆ ಇಳಿದಿರುವುದು ವಿಪರ್ಯಾಸ.

ಈ ವಿಷಯದಲ್ಲಿ ತಂದೆ-ತಾಯಂದಿರು ಹೊರತಾಗಿಲ್ಲ. ಮಕ್ಕಳಿಗೆ ಉಜ್ವಲ ಭವಿಷ್ಯ ಕಟ್ಟುವ ದಿಸೆಯಲ್ಲಿ ಮಕ್ಕಳ ಮೇಲೆ ಶಿಕ್ಷಣವೆಂಬ ದೊಡ್ಡ ಭಾರವನ್ನು ಹೇರಿ ಅವರ ಬದುಕನ್ನು ಕನಸುಗಳನ್ನು ಆಸೆ-ಆಕಾಂಕ್ಷೆಗಳನ್ನು ಮಣ್ಣುಪಾಲು ಮಾಡುವ ಸಾವಿರಾರು ತಂದೆ-ತಾಯಂದಿರನ್ನು ನಾವು ನೋಡುತ್ತಾ ಬಂದಿದ್ದೇವೆ ಹಾಗೆಂದು ಮಾತ್ರಕ್ಕೆ ತಂದೆ-ತಾಯಂದಿರು ಮಾಡುವುದು ತಪ್ಪು ಎಂದಲ್ಲ ಮಕ್ಕಳ ಬಗ್ಗೆ ಅವರ ಭವಿಷ್ಯದ ಬಗ್ಗೆ ಕಾಳಜಿ ಇರಬೇಕು ನಿಜ ಆದರೆ ಅದೇ ಅವರಿಗೆ ಮುಳ್ಳಾಗಬಾರದು. ಮಕ್ಕಳ ಮನಸ್ಸನ್ನು ಅರ್ಥ ಮಾಡಿಕೊಂಡು ಅವರಿಗೆ ಬೇಕಾದ ಪೂರಕ ವಾತಾವರಣವನ್ನು ಒದಗಿಸಿಕೊಡುವುದು ಅಪ್ಪ-ಅಮ್ಮಂದಿರ ಆದ್ಯ ಕರ್ತವ್ಯ. ಮಕ್ಕಳ ಹವ್ಯಾಸಗಳನ್ನು ಅವರಿಗೆ ಯಾವ ವಿಷಯದಲ್ಲಿ ಆಸಕ್ತಿ ಇದೆ ಎಂದು ಅರ್ಥಮಾಡಿಕೊಳ್ಳದೇ ಅವರ ಜೀವನದ ಬಗ್ಗೆ ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ.

ಶಿಕ್ಷಣವು ಜೀವನದ ಒಂದು ಪುಟ ಮಾತ್ರ ಜೀವನಕ್ಕೆ ಅವಶ್ಯಕವಾದ ಶಿಕ್ಷಣ ಬೇಕು ಹೊರತಾಗಿ ಶಿಕ್ಷಣವೇ ಜೀವನವಾಗಬಾರದು. ಮಕ್ಕಳ ಕೌಶಲ್ಯಗಳನ್ನು ಮತ್ತು ಹವ್ಯಾಸಗಳನ್ನು ಗುರುತಿಸುವ ಮತ್ತು ಬೆಳೆಸುವ ಗುಣ ಪ್ರತಿಯೊಬ್ಬ ತಂದೆ ತಾಯಂದಿರಲ್ಲಿ ಇರಬೇಕಾಗುತ್ತದೆ. ಹವ್ಯಾಸಗಳಿಗೆ ಅನುಗುಣವಾಗಿ ಅಥವಾ ಒಲವಿರುವ ಕೆಲಸಗಳನ್ನು ವೃತ್ತಿಯನ್ನಾಗಿ ಮಾಡಿಕೊಂಡಾಗ ಆ ವ್ಯಕ್ತಿಯಲ್ಲಿ ಎಂದಿಗೂ ಬೇಸರ & ಆಯಾಸವೆ ಇರುವುದಿಲ್ಲ (Wher Passion becomes Proffession Then Life Will be Happy) ಅಧಿಕ ಹಣ ಗಳಿಸಬೇಕೆಂಬ ಆಸೆ ಇರುವುದಿಲ್ಲ ಜೀವನ ಸುಖ-ಸಂತೋಷದಿಂದ ಕೂಡಿರುತ್ತದೆ. ಹೀಗಾಗಿ ಒಲವಿರುವ ಕೆಲಸಗಳನ್ನೇ ಆಯ್ಕೆ ಮಾಡಿಕೊಳ್ಳುವ ಮೂಲಕ ಜೀವನವನ್ನು ಉತ್ಸಾಹಭರಿತವಾಗಿ ವೃತ್ತಿ ಜೀವನವನ್ನು ಆನಂದಮಯವಾಗಿ ಅನುಭವಿಸುವ ಮೂಲಕ ಎಲ್ಲರಿಗೂ ಒಬ್ಬ ಆದರ್ಶ ವ್ಯಕ್ತಿಯಾಗಿ ಉನ್ನತ ಮಟ್ಟದಲ್ಲಿ ಬೆಳೆಯವದರಲ್ಲಿ ಯಾವುದೇ ಸಂಶಯವಿಲ್ಲ. ಅದಕ್ಕೆ ಹೇಳೊದು (Success is measured by Others but Satisfaction is measured by itself) ಅಂತ ಆದ್ದರಿಂದ ಸಾಧ್ಯವಾದಷ್ಟು ನಮ್ಮ ಹವ್ಯಾಸಗಳನ್ನು ವೃತ್ತಿಗಳನ್ನಾಗಿ ಪರಿವರ್ತಿಸಿ ಸುಖಕರ ಜೀವನ ನಡೆಸಲು ಪ್ರಯತ್ನಿಸೋಣ

ಶ್ರೀ. ಪ್ರಮೋದ ಬಿ. ಮಿರ್ಜಿ
ಉಪನ್ಯಾಸಕರು
ಮೌಲಾನಾ ಅಬುಲ ಕಲಾಂ ಆಝಾದ
ಬಿಎಸ್‌ಡಬ್ಲ್ಯೂ/ಎಮ್‌ಎಸ್‌ಡಬ್ಲ್ಯೂ
ಮಹಾವಿದ್ಯಾಲಯ, ನಣದಿ

# ರೆಡ್ ಕ್ರಾಸ್ ದಿನ 2023

ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ಆಂದೋಲನವು ಜಾಗತಿಕ ಮಾನವೀಯ ನೆಟ್‌ವರ್ಕ್ ಆಗಿದ್ದು ಅದು ಪ್ರಪಂಚದಾದ್ಯಂತದ ಪ್ರತಿಯೊಂದು ದೇಶದಲ್ಲಿ ಕಾರ್ಯನಿರ್ವಹಿಸುತ್ತದೆ ಮತ್ತು ಇದು ತುರ್ತು ಪರಿಸ್ಥಿತಿಗಳು, ವಿಪತ್ತುಗಳು, ಸಂಘರ್ಷಗಳು ಮತ್ತು ಇತರ ಬಿಕ್ಕಟ್ಟುಗಳ ಸಮಯದಲ್ಲಿ ಅಗತ್ಯವಿರುವವರಿಗೆ ಸಹಾಯ ಮತ್ತು ಬೆಂಬಲವನ್ನು ಒದಗಿಸುತ್ತದೆ. ಆಂದೋಲನವು ಮಾನವನ ದುಃಖವನ್ನು ನಿವಾರಿಸಲು, ಮಾನವ ಘನತೆಯನ್ನು ರಕ್ಷಿಸಲು ಮತ್ತು ಶಾಂತಿ, ಆರೋಗ್ಯ ಮತ್ತು ಯೋಗಕ್ಷೇಮವನ್ನು ಉತ್ತೇಜಿಸಲು ಕೆಲಸ ಮಾಡುತ್ತದೆ.

**ದಿನಾಂಕ:**

ವಿಶ್ವ ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ದಿನವನ್ನು ವಿಶ್ವ ರೆಡ್ ಕ್ರಾಸ್ ದಿನ ಎಂದೂ ಕರೆಯಲಾಗುತ್ತದೆ, ಇದನ್ನು ಪ್ರತಿ ವರ್ಷ ಮೇ 8 ರಂದು ಆಚರಿಸಲಾಗುತ್ತದೆ. ಇದು ಇಂಟರ್ನ್ಯಾಷನಲ್ ಕಮಿಟಿ ಆಫ್ ರೆಡ್ ಕ್ರಾಸ್ (ICRC) ಯ ಸ್ಥಾಪಕ ಮತ್ತು ಮೊದಲ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಪಡೆದ ಹೆನ್ರಿ ಡ್ಯೂನಾಂಟ್ ಅವರ ಜನ್ಮ ವಾರ್ಷಿಕೋತ್ಸವವನ್ನು ಸ್ಮರಿಸುತ್ತದೆ.

**ಇತಿಹಾಸ:**

ವಿಶ್ವ ರೆಡ್ ಕ್ರಾಸ್ ದಿನವು ಇಂಟರ್ನ್ಯಾಷನಲ್ ಕಮಿಟಿ ಆಫ್ ದಿ ರೆಡ್ ಕ್ರಾಸ್ (ICRC) ಯ ಸ್ಥಾಪಕ ಮತ್ತು ಮೊದಲ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಪಡೆದ ಹೆನ್ರಿ ಡ್ಯೂನಾಂಟ್ ಅವರ ಪ್ರಯತ್ನದಲ್ಲಿ ತನ್ನ ಮೂಲವನ್ನು ಹೊಂದಿದೆ. ವಿಶ್ವ ರೆಡ್ ಕ್ರಾಸ್ ದಿನದ ಇತಿಹಾಸವನ್ನು ರೆಡ್ ಕ್ರಾಸ್ ಚಳುವಳಿಯ ಸ್ಥಾಪನೆಯಿಂದ ಗುರುತಿಸಬಹುದು.

1859 ರಲ್ಲಿ, ಹೆನ್ರಿ ಡ್ಯೂನಾಂಟ್ ಎರಡನೇ ಇಟಾಲಿಯನ್ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಇಟಲಿಯ ಸೋಲ್ಫೆರಿನೊ ಯುದ್ಧಭೂಮಿಯಲ್ಲಿ ಗಾಯಗೊಂಡ ಸೈನಿಕರ ನೋವನ್ನು ವೀಕ್ಷಿಸಿದರು. ವೈದ್ಯಕೀಯ ಆರೈಕೆ ಮತ್ತು ಬೆಂಬಲದ ಕೊರತೆಯಿಂದ ಆಘಾತಕ್ಕೊಳಗಾದ ಅವರು ಗಾಯಾಳುಗಳಿಗೆ ಅವರ ರಾಷ್ಟ್ರೀಯತೆಯನ್ನು ಲೆಕ್ಕಿಸದೆ ಸಹಾಯವನ್ನು ಒದಗಿಸಲು ಸ್ಥಳೀಯ ನಾಗರಿಕರನ್ನು ಸಂಘಟಿಸಿದರು.

ಈ ಅನುಭವವು ಡ್ಯೂನಾಂಟ್ "ಎ ಮೆಮೊರಿ ಆಫ್ ಸೋಲ್ಫೆರಿನೊ" ಎಂಬ ಪುಸ್ತಕವನ್ನು ಬರೆಯಲು ಕಾರಣವಾಯಿತು, ಇದು ಯುದ್ಧದ ಸಮಯದಲ್ಲಿ ಗಾಯಗೊಂಡವರನ್ನು ನೋಡಿಕೊಳ್ಳಲು ಸ್ವಯಂಸೇವಕ ಗುಂಪುಗಳನ್ನು ಸ್ಥಾಪಿಸಲು ಕರೆ ನೀಡಿತು. 1863 ರಲ್ಲಿ, ಅವರ ಪ್ರಯತ್ನಗಳು ಗಾಯಗೊಂಡವರಿಗೆ ಪರಿಹಾರಕ್ಕಾಗಿ ಅಂತರರಾಷ್ಟ್ರೀಯ ಸಮಿತಿಯ ರಚನೆಗೆ ಕಾರಣವಾಯಿತು, ನಂತರ ಇದನ್ನು ಇಂಟರ್ನ್ಯಾಷನಲ್ ಕಮಿಟಿ ಆಫ್ ರೆಡ್ ಕ್ರಾಸ್ (ICRC) ಎಂದು ಕರೆಯಲಾಯಿತು.

ಸಶಸ್ತ್ರ ಸಂಘರ್ಷಗಳ ಸಮಯದಲ್ಲಿ ತಟಸ್ಥ ಮತ್ತು ನಿಷ್ಪಕ್ಷಪಾತ ಮಾನವೀಯ ನೆರವು ನೀಡಲು ICRC ಗುರಿಯನ್ನು ಹೊಂದಿದೆ. ವಿಶ್ವ ರೆಡ್ ಕ್ರಾಸ್ ದಿನದ ಕಲ್ಪನೆಯನ್ನು 1920 ರ ದಶಕದಲ್ಲಿ ಪ್ರಸ್ತಾಪಿಸಲಾಯಿತು ಮತ್ತು ನಂತರದ ವರ್ಷಗಳಲ್ಲಿ ವೇಗವನ್ನು ಪಡೆಯಿತು. ಇದನ್ನು ಅಧಿಕೃತವಾಗಿ 1933 ರಲ್ಲಿ ಜಪಾನ್‌ನ ಟೋಕಿಯೊದಲ್ಲಿ ರೆಡ್‌ಕ್ರಾಸ್‌ನ 20 ನೇ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಸ್ಥಾಪಿಸಲಾಯಿತು.

ಸಮ್ಮೇಳನವು ಮೇ 8 ರಂದು ಹೆನ್ರಿ ಡ್ಯೂನಾಂಟ್ ಅವರ ಜನ್ಮವನ್ನು ಸ್ಮರಣಾರ್ಥವಾಗಿ ಮತ್ತು ರೆಡ್ ಕ್ರಾಸ್ ಚಳುವಳಿಯ ಮಾನವೀಯ ಕೆಲಸವನ್ನು ಗೌರವಿಸುವ ದಿನವೆಂದು ಗೊತ್ತುಪಡಿಸಿತು. ಅಂದಿನಿಂದ, ವಿಶ್ವ ರೆಡ್ ಕ್ರಾಸ್ ದಿನವನ್ನು ವಾರ್ಷಿಕವಾಗಿ ಮೇ 8 ರಂದು ಆಚರಿಸಲಾಗುತ್ತದೆ.

ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಯಕ್ಸಂಬಾ




**ಮಹತ್ವ:**

ವಿಶ್ವ ರೆಡ್ ಕ್ರಾಸ್ ದಿನದ ಉದ್ದೇಶವು ಜಾಗತಿಕವಾಗಿ ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ಚಳುವಳಿ ನಡೆಸುತ್ತಿರುವ ಮಾನವೀಯ ಕಾರ್ಯಗಳನ್ನು ಗೌರವಿಸುವುದು. ಇದು ಸಂಸ್ಥೆಯ ತತ್ವಗಳು, ಧ್ಯೇಯ ಮತ್ತು ಚಟುವಟಿಕೆಗಳ ಬಗ್ಗೆ ಅರಿವು ಮೂಡಿಸಲು ಮತ್ತು ಅದರ ಸ್ವಯಂ ಸೇವಕರು ಮತ್ತು ಸಿಬ್ಬಂದಿಗಳ ಸಮರ್ಪಣೆ ಮತ್ತು ಧೈರ್ಯವನ್ನು ಗುರುತಿಸಲು ಒಂದು ಅವಕಾಶವಾಗಿ ಕಾರ್ಯನಿರ್ವಹಿಸುತ್ತದೆ.

ವಿಶ್ವ ರೆಡ್ ಕ್ರಾಸ್ ದಿನವು ಬಿಕ್ಕಟ್ಟಿನ ಸಮಯದಲ್ಲಿ ಮಾನವೀಯತೆ, ಸಹಾನುಭೂತಿ ಮತ್ತು ಒಗ್ಗಟ್ಟಿನ ಪ್ರಾಮುಖ್ಯತೆಯ ಜ್ಞಾಪನೆಯಾಗಿ ಕಾರ್ಯನಿರ್ವಹಿಸುತ್ತದೆ. ಇದು ಮಾನವೀಯ ನೆರವು ನೀಡುವಲ್ಲಿ ಮತ್ತು ಜಗತ್ತಿನಾದ್ಯಂತ ಮಾನವೀಯ ಮೌಲ್ಯಗಳನ್ನು ಉತ್ತೇಜಿಸುವಲ್ಲಿ ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ಆಂದೋಲನದ ಪ್ರಮುಖ ಪಾತ್ರವನ್ನು ಎತ್ತಿ ತೋರಿಸುತ್ತದೆ.

**ಆಚರಣೆ:**

ವಿಶ್ವ ರೆಡ್ ಕ್ರಾಸ್ ದಿನದಂದು, ರಾಷ್ಟ್ರೀಯ ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ಸೊಸೈಟಿಗಳು, ಇಂಟರ್ನ್ಯಾಷನಲ್ ಫೆಡರೇಶನ್ ಆಫ್ ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ಸೊಸೈಟೀಸ್ (IFRC), ಮತ್ತು ICRC ಯಿಂದ ವಿವಿಧ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳನ್ನು ಆಯೋಜಿಸಲಾಗಿದೆ. ಈ ಚಟುವಟಿಕೆಗಳು ರಕ್ತದ ಡ್ರೈವ್‌ಗಳು, ಪ್ರಥಮ ಚಿಕಿತ್ಸಾ ತರಬೇತಿ ಅವಧಿಗಳು, ನಿಧಿಸಂಗ್ರಹಣೆ ಅಭಿಯಾನಗಳು, ಸಾರ್ವಜನಿಕ ಜಾಗೃತಿ ಅಭಿಯಾನಗಳು ಮತ್ತು ಅತ್ಯುತ್ತಮ ಸ್ವಯಂ ಸೇವಕರ ಗುರುತಿಸುವಿಕೆ ಮತ್ತು ಮಾನವೀಯ ಸಾಧನೆಗಳನ್ನು ಒಳಗೊಂಡಿರಬಹುದು.

**ಥೀಮ್:**

ಇಂಟರ್ನ್ಯಾಷನಲ್ ಫೆಡರೇಶನ್ ಆಫ್ ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ಸೊಸೈಟೀಸ್ ಪ್ರಕಾರ, ವಿಶ್ವ ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ದಿನವು ಮಾನವತಾವಾದದ ಮನೋಭಾವವನ್ನು ಆಚರಿಸಲು ಮತ್ತು ಅವರ ಸಮುದಾಯಗಳಲ್ಲಿ ವ್ಯತ್ಯಾಸವನ್ನು ಉಂಟುಮಾಡುವ ವ್ಯಕ್ತಿಗಳನ್ನು ಗುರುತಿಸುವ ಸಮಯವಾಗಿದೆ. ಅದು ಹೇಳಿದೆ, “ಈ ವರ್ಷ, ನಮ್ಮ ಥೀಮ್: "ನಾವು ಮಾಡುವವವಂತಹ ಪ್ರತಿಯೊಂದೂ ಕೆಲಸ ಹೃದಯದಿಂದ ಬರಬೇಕು".



ನವದೆಹಲಿಯಲ್ಲಿ ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಜೆ. ಪಿ. ನಡ್ಡಾ ಅವರನ್ನು ಜೊಲ್ಲೆ ದಂಪತಿ ಸೌಹಾರ್ದಯುತವಾಗಿ ಭೇಟಿ ಮಾಡಿದ ದೃಶ್ಯ.



ನವದೆಹಲಿಯಲ್ಲಿ ಕೇಂದ್ರ ಗಣಿ, ಕಲ್ಲಿದ್ದಲು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಪ್ರಲ್ಹಾದ ಜೋಶಿ ಅವರನ್ನು ಜೊಲ್ಲೆ ದಂಪತಿ ಸೌಹಾರ್ದಯುತವಾಗಿ ಭೇಟಿ ಮಾಡಿದ ದೃಶ್ಯ.



ನಿಪ್ಪಾಣಿ ನಗರದ ಶ್ರೀ ಛತ್ರಪತಿ ಶಿವಾಜಿ ಮಹಾರಾಜ ಉದ್ಯಾನವನದಲ್ಲಿ, ನೌಕಾಪಡೆಯ ಯುದ್ಧ ವಿಮಾನ ಅಳವಡಿಸಲು ನೌಕಾಪಡೆಯಿಂದ 17 ತಂತ್ರಜ್ಞರ ತಂಡ ಬಂದಿರುವ ನಿಮಿತ್ತವಾಗಿ, ಸ್ಥಳಕ್ಕೆ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಹಾಗೂ ಶ್ರೀ ಬಸವಪ್ರಸಾದ ಜೊಲ್ಲೆ ಯವರು ಭೇಟಿ ನೀಡಿದ ದೃಶ್ಯ



ನಿಪ್ಪಾಣಿ ವಿಧಾನಸಭಾ ಕ್ಷೇತ್ರದಿಂದ ಸತತ ಮೂರನೇ ಬಾರಿಗೆ ಶಾಸಕಿಯಾಗಿ ಆಯ್ಕೆಯಾದ ಸಲುವಾಗಿ ಬೆಳಗಾವಿಯಲ್ಲಿ, ಚುನಾವಣಾ ಅಧಿಕಾರಿಗಳಿಂದ ನಿಪ್ಪಾಣಿ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಪ್ರಮಾಣಪತ್ರ ಸ್ವೀಕರಿಸುತ್ತಿರುವ ದೃಶ್ಯ.



ಚಿಕ್ಕೋಡಿ ನಗರದ ನ್ಯಾಯಾಧೀಶರ ನ್ಯಾಯಾಲಯದ ಆವರಣದಲ್ಲಿ, ಡಾ. ಬಿ.ಆರ್. ಅಂಬೇಡ್ಕರ್ ಅವರ ಐತಿಹಾಸಿಕ ಹಾಜರಾತಿಯ ಸ್ಮರಣಾರ್ಥ ಶಿಲಾ ಪ್ರತಿಷ್ಠಾಪನೆ ಉದ್ಘಾಟನಾ ಸಮಾರಂಭದಲ್ಲಿ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಅವರನ್ನು ಸತ್ಕರಿಸುತ್ತಿರುವುದು.



ನವದೆಹಲಿಯಲ್ಲಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವರಾದ ಶ್ರೀ ನಿತಿನ್ ಗಡ್ಕರಿ ಅವರನ್ನು ಜೊಲ್ಲೆ ದಂಪತಿ ಸೌಹಾರ್ದಯುತವಾಗಿ ಭೇಟಿ ಮಾಡಿದ ದೃಶ್ಯ.



ಕೆ.ಓ.ಎಫ್. ವ್ಯವಸ್ಥಾಪಕರಾದ ಪ್ರಕಾಶ. ಕೆ. ಬಂಡಿವಾಡ, ಅವರು ನಿವೃತ್ತಿ ಹೊಂದಿದ ನಿಮಿತ್ಯ ಪಿಂಚಣಿಯ ಚೆಕ್‌ನ್ನು ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರು ನಿಡುತ್ತಿರುವ ದೃಶ್ಯ



ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ ಯಕ್ಸಂಬಾ ಶಾಖೆ ಹಳ್ಳೂರದಲ್ಲಿ ಜ್ಯೋತಿ ಕಿರು ಸಾಲ ರೂ. 30000/- ಪಡೆದಿದ್ದ ಶ್ರೀಮತಿ ಶಾಂತವ್ವ ಮಲ್ಲಪ್ಪ ಬೋರಡ್ಡಿ ಯವರ ಪತಿ ಮಲ್ಲಪ್ಪ ಭೀಮಪ್ಪ ಬೋರಡ್ಡಿ ಯವರು ನಿಧನ ಹೊಂದಿರುವ ಕಾರಣ ಸದಸ್ಯರ ಕಲ್ಯಾಣ ನಿಧಿಯಿಂದ ಒಟ್ಟು ರೂ. 75000/- ವಿಮಾ ಹಣವನ್ನು ವಿತರಿಸುತ್ತಿರುವ ದೃಶ್ಯ

ಜೊಲ್ಲೆ ಉದ್ಯೋಗ ಸಮೂಹ ರಾಣಿ ಚನ್ನಮ್ಮಾ ವೃತ್ತ, ಯಕ್ಸಂಬಾ ತಾ. ಚಿಕ್ಕೋಡಿ ಜಿ. ಬೆಳಗಾವಿ- 591244 Ph : 9844469288 / 7760983792 E-mail : darpanjus6@gmail.com
ಪ್ರಧಾನ ಸಂಪಾದಕರು :- ಸೌ. ಸುಧಾ ಡಿ. ಪಾಟೀಲ, ಉಪನ್ಯಾಸಕರು, ಕನ್ನಡ ವಿಭಾಗ